## -: ವಾರ್ಡ್ ಸಮಿತಿ ಸಭೆ :-

## ದಿನಾಂಕ: 05.12.2020

ವಿಷಯ: ವಾರ್ಡ್ ಸಂಖ್ಯೆ 74 ಶಕ್ತಿಗಣಪತಿನಗರ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.
ಉಲ್ಲೇಖ: ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)/ಪಿ.ಆರ್/35/ 2020-21 ದಿನಾಂಕ: 21.09.2020

ದಿನಾಂಕ 05.12.2020 ರಂದು ಸಮಯ ಬೆಳಿಗ್ಗೆ 10.00 ಗಂಟೆಗೆ ವಾರ್ಡ್ ಸಂಖ್ಯೆ 74 ಶಕ್ತಿಗಣಪತಿನಗರ ವಾರ್ಡ್ ಸದಸ್ಯರ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಚಂದ್ರಶೇಖರ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ಅಧ್ಯಕ್ಷರು)
2. ಶ್ರೀ ಕೆ.ಎಂ. ಯದುಕೃಷ್ಣ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ಕಾರ್ಯದರ್ಶಿ)
3. ಕುಮಾರಿ ಕೆ. ಸಮಂಜಸ ಸಹಾಯಕ ಅಭಿಯಂತರರು
4. ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ.
5. ಶ್ರೀ ಪ್ರದೀಪ್ ಕುಮಾರ್, ಹಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ ಕೆ. ಜಾಕಬ್, ಕಿರಿಯ ಆರೋಗ್ಯ ಪರಿವೀಕ್ಷಕರು
7. ಡಾ॥ ಕುಸುಮ,
8. ಪ್ರಕಾಶ್, ಬೀದಿ ದೀಪಗಳ ನಿರ್ವಹಣೆ,
9. ವೆಂಕಟೇಶ್, ಕಂದಾಯ ಪರಿವೀಕ್ಷಕರು
10. ಜಿ. ವೆಂಕಟೇಶ್ ಕಂದಾಯ ವಸೂಲಿಗಾರರು,
11. ಪ್ರಶಾಂತ್, ಮಾರ್ಷಲ್
12. ಶ್ರೀ ನಾಗರಾಜ್, ಸೂಪರ್‌ವೈಸರ್, ಘನತ್ಯಾಜ್ಯ ನಿರ್ವಹಣೆ,
13. ರಫೀಕ್ ಅಹಮದ್,

**ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಬಿ.ಡಿ. ಶ್ರೀನಿವಾಸ್
2. ಶ್ರೀ ಕೆ.ಪಿ. ಅಶೋಕ್
3. ಶ್ರೀ ರವಿಕುಮಾರ್
4. ಶ್ರೀ ಜಿ. ಸತ್ಯನಾರಾಯಣ
5. ಶ್ರೀ ರಾಜೇಶ್ ಶಾಸ್ತ್ರಿ
6. ಶ್ರೀಮತಿ ಲಲಿತಮ್ಮ
7. ಶ್ರೀಮತಿ ಇಂದ್ರಮ್ಮ
8. ಶ್ರೀ ನಾಗರಾಜು
9. ಶ್ರೀ ಹೇಮಂತ್
10. ಎನ್.ಜಿ. ಗೋವಿಂದಯ್ಯ

ಶ್ರೀ ಯದುಕೃಷ್ಣ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

1. ಅಧ್ಯಕ್ಷರು ಸಭೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ My city my budget-2021-22 ರ ಅಡಿಯಲ್ಲಿ ವಾರ್ಡ್‌ನಲ್ಲಿ ಸಾರ್ವಜನಿಕ ಶೌಚಾಲಯ ಹಾಗೂ ಪಾದಚಾರಿ ಮಾರ್ಗದ ನಿರ್ಮಾಣ ಮಾಡಲು ಉದ್ದೇಶಿಸಿದ್ದು ಸೂಕ್ತ ಸ್ಥಳ ಸೂಚಿಸಲು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ತಿಳಿಸಲಾಯಿತು.
2. ಸಭೆಯಲ್ಲಿ ಹಾಜರಿದ್ದ ಆರೋಗ್ಯ ವೈದ್ಯಾಧಿಕಾರಿಗಳು ಪಾಲಿಕೆ ಆಸ್ಪತ್ರೆಯಲ್ಲಿ ಔಷಧಗಳ ಸಂಗ್ರಹಣೆಗೆ ಸಂಗ್ರಹಣಾ ಕೊಠಡಿ (Storage blocks for medicine ) ಕೊರತೆಯಿರುತ್ತದೆ ಹಾಗೂ ಗೋಡೆಗಳಲ್ಲಿ ನೀರು ಸೋರುತ್ತಿರುತ್ತದೆ (Water seepage) ಇದರಿಂದ ಕಟ್ಟಡಕ್ಕೆ ಹಾನಿಯುಂಟಾಗುತ್ತಿದ್ದು ಇದನ್ನು ಸರಿಪಡಿಸಲು ಸೂಚಿಸಿರುತ್ತಾರೆ. ಈ ಬಗ್ಗೆ ವಾರ್ಡ್‌ನ ಅಭಿಯಂತರರು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿ ದುರಸ್ಥಿ ಕಾಮಗಾರಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.
3. ಮಳೆಯಿಂದಾಗಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಶೀಘ್ರದಲ್ಲಿ ಮುಚ್ಚಲು ಸೂಚಿಸಲಾಯಿತು.
4. ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಮುಂದಿನ ಸಭೆಯಲ್ಲಿ ಪಶುಸಂಗೋಪನಾ ಇಲಾಖೆಯವರನ್ನು ಮುಂದಿನ ಸಭೆಯಲ್ಲಿ ಕರೆಯಲು ತೀರ್ಮಾನಿಸಲಾಯಿತು.
5. ಘನತ್ಯಾಜ್ಯ ಸಮರ್ಪಕ ವಿಲೇವಾರಿ ಕೈಗೊಳ್ಳಲು ಹಾಗೂ ಬೀದಿ ನಾಯಿಗಳ ಹಾವಳಿ ಕಡಿಮೆ ಮಾಡಲು ವಾರ್ಡ್ ವ್ಯಾಪ್ತಿಯಲ್ಲಿ ಚಿಕನ್, ಮಟನ್ ಮಾರಾಟ ಕೇಂದ್ರಗಳು ಎಷ್ಟು ಇವೆ ಎಂದು ಪರಿಶೀಲಿಸಿ ವರದಿ ನೀಡಲು ಹಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.
6. ಅಧ್ಯಕ್ಷರು ಸಭೆಯಲ್ಲಿ ಬೀದಿ ದೀಪಗಳ ದುಸ್ಥಿತಿಯ ಬಗ್ಗೆ ಮಾತನಾಡಿ ದುಸ್ಥಿತಿಯಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸುವಂತೆ ಸಭೆಯಲ್ಲಿ ಹಾಜರಿದ್ದ ಬೀದಿ ದೀಪಗಳ ನಿರ್ವಹಣಾ ಗುತ್ತಿಗೆದಾರರಿಗೆ ಸೂಚಿಸಿದರು.
7. ಪಾರ್ಕ್‌ನಲ್ಲಿರುವ ತೆರೆದ ವ್ಯಾಯಾಮ ಉಪಕರಣಗಳನ್ನು ಅಳವಡಿಸಿರುವ ಪ್ರದೇಶವನ್ನು ಸಾರ್ವಜನಿಕರ ಮುಕ್ತಗೊಳಿಸಲು ಚರ್ಚಿಸಲಾಯಿತು.
8. ಹೊಸದಾಗಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಶೀಘ್ರದಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಮುಕ್ತಗೊಳಿಸಲು ಕೋರಿದರು.
9. ಕಮಲಾನಗರ 4ನೇ ಮುಖ್ಯ ರಸ್ತೆಯಲ್ಲಿ ಅಡ್ಡ ಮೋರಿ ಕಾಮಗಾರಿ ಅಪೂರ್ಣಗೊಂಡಿದ್ದು ಶೀಘ್ರದಲ್ಲಿ ಪ್ರಾರಂಭಿಸಲು ತೀರ್ಮಾನ ಮಾಡಲಾಯಿತು.
10. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನೀಡಿರುವ ಅನುದಾನದಲ್ಲಿ ಒಂಟಿ ಮನೆ ನಿರ್ಮಿಸಿಕೊಳ್ಳುತ್ತಿರುವ ಫಲಾನುಭವಿಗಳು ಹಲವಾರು ಸಮಸ್ಯೆಗಳನ್ನು ಸಭೆಯ ಗಮನಕ್ಕೆ ತಂದಿದ್ದು, ಮುಂದಿನ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಸ್ವಾಗತಿಸಲು ತೀರ್ಮಾನಿಸಲಾಯಿತು.

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಎಲ್ಲಾ ಇಲಾಖೆಗಳು ಪರಸ್ಪರ ಚರ್ಚಿಸಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.

ಸಹಾಯಕ ಅಭಿಯಂತರರು
ಮತ್ತು ಕಾರ್ಯದರ್ಶಿಗಳು,
ವಾರ್ಡ್ ನಂ. 74 ಶಕ್ತಿಗಣಪತಿನಗರ

05/12/20
ಅಧ್ಯಕ್ಷರು
ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ 74,
ಶಕ್ತಿಗಣಪತಿನಗರ

## ಹಾಜರಿದ್ದ ವಾರ್ಡ್ ಸಂಖ್ಯೆ 74ರ ವಾರ್ಡ್ ಕಮಿಟಿ ಸದಸ್ಯರುಗಳು

| ಕ್ರ.ಸಂ. | ಹೆಸರು | ಪದನಾಮ | ಮೊಬೈಲ್ ಸಂಖ್ಯೆ | ಸಹಿ |
|---|---|---|---|---|
| 1 | ಚಂದ್ರಶೇಖರ್ | ನೋಡಲ್ ಆಫೀಸರ್ | 8971318337 | |
| 2 | ಕೆ.ಎಂ. ಯದುಕೃಷ್ಣ | ಸ.ಅ. (ಪ್ರಭಾರ) | 9901050544 | |
| 3 | ರಶ್ಮಿ | ಸ.ಕಾ.ನಿ.ಅ. (ಘನತ್ಯಾಜ್ಯ ನಿರ್ವಹಣೆ) | 9611019878 | |
| 4 | ಸ.ಕಾ.ನಿ.ಅ. | ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444073 | |
| 5 | ಸ.ಅ. | ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444074 | |
| 6 | ಶಂಕರ್‌ರಾಜ್ | ಸ.ಕಾ.ನಿ.ಅ (ಬೆಸ್ಕಾಂ) | 9741715321 | |
| 7 | ಪೋಲೀಸ್ ಇನ್ಸ್‌ಪೆಕ್ಟರ್ | ಬಸವೇಶ್ವರನಗರ ಪೋಲೀಸ್ ಠಾಣೆ | 9480801729 | |
| 8 | ಸಮಂಜಸ ಕೆ. | ಸ.ಅ./ಕಾರ್ಯದರ್ಶಿಗಳು | 9148019979 | |
| 9 | ಪ್ರದೀಪ್ | ಹಿರಿಯ ಆರೋಗ್ಯ ಅಧಿಕಾರಿಗಳು | 8892632267 | |
| 10 | ಜಾಕಬ್ | ಕಿರಿಯ ಆರೋಗ್ಯ ಪರಿವೀಕ್ಷಕರು | 7899093478 | |
| 11 | ರಫಿಕ್ | ಹೆಡ್‌ಗ್ಯಾಂಗ್‌ಮೆನ್ ಬಿ.ಬಿ.ಎಂ.ಪಿ. | 8884442224 | |
| 12 | ನಾಗರಾಜ್ | ಸೂಪರ್‌ವೈಸರ್ (ಘನತ್ಯಾಜ್ಯ ನಿರ್ವಹಣೆ) | 7829471990 | |
| 13 | ಚಂದ್ರಶೇಖರ್ | ಸೂಪರ್‌ವೈಸರ್ (ಘನತ್ಯಾಜ್ಯ ನಿರ್ವಹಣೆ) | 9731155703 | |
| 14 | ಡಾ॥ ಕುಸುಮ | ಆರೋಗ್ಯ ಇಲಾಖೆ | 9901500116 | |
| 15 | [illegible] | [illegible] | 9113950153 | |